ಅವನ ಮನಸ್ಸಿನಲ್ಲೊಂದು ಸಣ್ಣ ಸುಳಿಗಾಳಿ ಬೀಸಿಹೋಯಿತು. ತನ್ನ ನಗುವಿಗೆ ತಿರುಗಿ ನಗದ ಅಣ್ಣ ಅಪರಿಚಿತನಂತೆ ಕಂಡದ್ದು ಯಾಕೆಂದು ಸುಮಿ ಒಳಗೆ ಹೋಗುವವರೆಗೂ ಯೋಚಿಸಿದಳು. ಅವಳ ಮನಸ್ಸಿನಲ್ಲಿ ಏನೋ ಚುಚ್ಚಿದಂತಾಯಿತು. ಅವನನ್ನು ಅಪರಿಚಿತ ಮಾಡಿದ್ದು ನಾನೇ! ಚಿಕ್ಕ ಚಿಕ್ಕ ವಿವರಗಳನ್ನೂ ಬಿಡದೇ ಹೇಳುವ ನಾನು, ಪ್ರೇಮ ಸಂಭವಿಸಿದ ಬಗ್ಗೆ ಅಣ್ಣನಿಗೆ ಅರುಹಲಿಲ್ಲ ಏಕೆ ಎನ್ನುವುದು ಅವಳಿಗೇ ಆಶ್ಚರ್ಯವಾಯಿತು. ಜೀವದಷ್ಟು ಪ್ರೀತಿಸುವ ಸಹೋದರನಲ್ಲಿ ಇಂಥ ದಿವ್ಯವಾದದ್ದನ್ನು ಮುಚ್ಚಿಟ್ಟೆನಲ್ಲ ಎಂಬ ತಪ್ಪಿತಸ್ಥ ಭಾವವು ಅವಳನ್ನು ಕೊರೆಯಲು ಶುರುವಾಯಿತು. ಆ ರಾತ್ರಿ ಅವಳಿಗೆ ನಿದ್ದೆ ಬೀಳಲಿಲ್ಲ. ಮಲಗಿದ್ದ ವಿರುಪಾಕ್ಷಿಯನ್ನು ನಡುರಾತ್ರಿಯಲ್ಲೆ ಎಬ್ಬಿಸಿ, ಅವನ ಎರಡೂ ಕೈಗಳನ್ನು ಹಿಡಿದು ತಲೆಯೂರಿದಳು. 'ಮನ್ನಿಸು ಬ್ರೋ' ಎಂದಳು. ವಿರುಪಾಕ್ಷಿ ಅರೆ ನಿದ್ದೆ ಮತ್ತು ಅರೆ ಎಚ್ಚರದ ಸ್ಥಿತಿಯಲ್ಲಿ ಸಹೋದರಿಯನ್ನು ನೋಡಿದ. ಅವಳ ಕಣ್ಣುಗಳಲ್ಲಿ ಹಣತೆ ದೀಪವೊಂದು ಬೆಳಗುತ್ತಿತ್ತು. ಶೈಲತ್ತೆ ಹೇಳುತ್ತಿದ್ದ ಪ್ರೇಮಕತೆಗಳನ್ನು ವಿರುಪಾಕ್ಷಿಯೂ ಆಲಿಸಿದವನೇ ಅಲ್ಲವೇ! ಅವನಿಗೆ ಸಹೋದರಿಯ ಮನಸ್ಸಿನಲ್ಲೇನಿದೆ ಎಂಬುದು ಅರ್ಥವಾಯಿತು. ಹಗುರ ಅವಳನ್ನು ಎಬ್ಬಿಸಿ ಹಣೆಗೆ ಮುತ್ತಿಟ್ಟು 'ಈಗ ಹೋಗಿ ಮಲ್ಕೋ, ನಾಳೆ ಮಾತಾಡೋಣ' ಅಂದ.

ಸುಮಿಯೇನೋ ಹಗುರಾದಳು. ಆದರೆ ವಿರುಪಾಕ್ಷಿಗೆ ರಾತ್ರಿಯಿಡೀ ಜಾಗರವಾಯ್ತು. ಸುಮಿ ಪ್ರೇಮದ ಹಾದಿಯಲ್ಲಿ ಸಾಕಷ್ಟು ಮುನ್ನಡೆದಿರುವುದು ಅವನಿಗೆ ಅರಿವಾಯ್ತು. ಅವನು ದ್ವಂದ್ವದಲ್ಲಿ ಬೆಂದ. ಒಂದು ಕಡೆ ಶೈಲತ್ತೆ ಪರಂಪರೆಯ ಪ್ರೇಮ. ಇನ್ನೊಂದಡೆ ತಲೆಮಾರುಗಳಿಂದಲೂ ರಕ್ತದಲ್ಲೇ ಬಂದ ಲಿಂಗನಗೌಡ ಪಾಟೀಲ ಮನೆತನದ ಕಠೋರತೆ ಮತ್ತು ನಿಷ್ಠುರತೆ. ಒಮ್ಮೆ ಅಪ್ಪನಾಗಿ ಮನೆತನ, ಅಂತಸ್ತು, ಸಮಾಜ, ಇಜ್ಜತ್ತು ಎಂದು ಯೋಚಿಸುತ್ತಿದ್ದ. ಇನ್ನೊಮ್ಮೆ ಅತ್ತೆಯಾಗಿ ಪ್ರೀತಿ, ಪ್ರೇಮ, ಹೃದಯ ಎಂದು ಯೋಚಿಸುತ್ತಿದ್ದ. ಚೆನ್ನಾಗಿ ಓದಲು ಬಂದವಳಿಗೆ ಈ ಪ್ರೀತಿಪ್ರೇಮದ ಚಕ್ಕರ್ ಯಾಕೆ ಬೇಕಿತ್ತು? ಎಂದು ಅವನೊಳಗೆ ಅಪ್ಪ ಆರ್ಭಟಿಸಿದರೆ, ಪ್ರೀತಿ ಪ್ರೇಮ ಎಲ್ಲವೂ ಹೇಳಿ ಬರುತ್ತವೆಯೇ ಕಂದಾ, ಎಂದು ಶೈಲತ್ತೆ ಸಮಾಧಾನ ಮಾಡುತ್ತಿದ್ದಳು. ಇಲ್ಲ, ಇದು ನನಗೆ ಮಾತ್ರ ಮಾಡಿದ ದ್ರೋಹವಲ್ಲ, ನಮ್ಮ ಮನೆತನಕ್ಕೇ ಮಾಡಿದ ದ್ರೋಹ. ಪ್ರೀತಿಯ ಸಹೋದರಿ ಎಂದು ನೀಡಿದ ಸ್ವಾತಂತ್ರ್ಯವನ್ನು ಹೇಗೆ ದುರುಪಯೋಗಪಡಿಸಿಕೊಂಡಳು! ಚೆನ್ನಾಗಿ ಓದಲಿ ಡಿಗ್ರೀ ಪಡೆಯಲಿ. ಸ್ವತಂತ್ರ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲಿ ಎಂದು ನಾನು ಬಯಸಿದ್ದೆ. ಅವಳ ಬಗ್ಗೆ ಏನೇನೋ ಕನಸು ಕಂಡಿದ್ದೆ. ವಿಶ್ವಾಸಕ್ಕೆ ದ್ರೋಹ ಮಾಡಿದಳು... ಇಲ್ಲ ಇವಳ ಈ ಲವ್ವುಗಿವ್ವು ಮೊಳಕೆಯಲ್ಲೇ ಚಿವುಟಿ ಹಾಕಬೇಕು... ನಾಳೆಯೇ ಇವಳನ್ನು ಊರಿಗೆ ಕಳುಹಿಸುತ್ತೇನೆ. ಹಟ ಮಾಡಿದರೆ ಕೆನ್ನೆಗೊಂದು ಬಿಗಿಯುತ್ತೇನೆ. ಅಪ್ಪನಿಗೆ ಹೇಳಿ ಇವಳನ್ನು ಮನೆಯಲ್ಲಿ ಕೂಡುಹಾಕಿಸುತ್ತೇನೆ. ಬುದ್ಧಿ ಕಲಿಯದಿದ್ದರೆ, ವರನನ್ನು ಹುಡುಕಿ ಮದುವೆ ಮಾಡಿಬಿಡಿ ಎನ್ನುತ್ತೇನೆ... ಎಂದು ಉಗ್ರಭಾವದಲ್ಲಿ ಎದ್ದು ಅವಳ ಕೋಣೆಗೆ ಹೋದ.

ಸುಮಿ ಒಂದು ಪಕ್ಕ ತಿರುಗಿ ಮಲಗಿದ್ದಳು. ನಿದ್ದೆಯಲ್ಲೂ ಕಿರುನಗೆ ಹಾಗೇ ಇತ್ತು. ಕೆನ್ನೆಗೆ ದುಪ್ಪಟ್ಟಾ ಒತ್ತಿಕೊಂಡಿದ್ದಳು. ಫ್ಯಾನ್ ಗಾಳಿಗೆ ಕಂಪಿಸುತ್ತಿದ್ದ ದುಪ್ಪಟ್ಟಾ ತುದಿ ಆಗಾಗ ಅವಳ ಮುಖದ ಮೇಲೆ ಕಚಗುಳಿಯಿಡುತ್ತಿತ್ತು. ಆ ತುದಿಯಲ್ಲಿ ಏನೋ ಬರೆದ ಹಾಗಿದೆಯಲ್ಲ. ಪ್ರೀತ್... ಓಹ್ ಇವನೇ ನನ್ನ ಸಹೋದರಿಯ ಮನಸ್ಸು ಕದ್ದವನು! ತಂದೆ ತಾಯಿ ಚಿಕ್ಕಪ್ಪ ಚಿಕ್ಕಮ್ಮ ಅಜ್ಜಿ ಸಹೋದರರು ಸಹೋದರಿಯರು – ಇವರೆಲ್ಲರ ಅಪಾರ ಪ್ರೀತಿಯೂ ಅವಳಿಗೆ ಅರಕೆಯಾಯಿತೆ? ಜಾಣೆಯಾದ ಸುಮಿ ಹೀಗೆ ಯಾವುದೋ ಕಡಲ ಕಿನಾರೆಯ ಹುಡುಗನ ಆಕರ್ಷಣೆಗೆ ಬೀಳುವಳು ಎಂದು ಎಣಿಸಿರಲಿಲ್ಲವಲ್ಲ. ಆ ಹುಡುಗನೇ ಏನೋ ಮೋಸ ಮಾಡಿರಬೇಕು. ಅವನನ್ನು ಸುಮ್ಮನೇ ಬಿಡುವುದಿಲ್ಲ. ಮುಗ್ಧ ಸಹೋದರಿಯ ಚಿತ್ತ ಚಂಚಲಗೊಳಿಸಿದ್ದಕ್ಕೆ ಕೆನ್ನೆಗೊಂದು ಬಿಗಿಯುತ್ತೇನೆ. ಇನ್ನುಂದೆ ಅವಳ ಸುದ್ದಿಗೆ ಬರದಂತೆ ಮಾಡುತ್ತೇನೆ.

ವಿರುಪಾಕ್ಷಿಯ ಪ್ರತಿ ಯೋಚನೆಯನ್ನು ಕೆಣಕುವಂತೆ ದುಪ್ಪಟ್ಟಾ ಅಲುಗಾಡುತ್ತಿತ್ತು. ಅದನ್ನು ಹರಿಯುವಷ್ಟು ಸಿಟ್ಟು ಬಂತು ಅವನಿಗೆ. ಆದರೆ ಮುಗ್ಧ ಮಗುವಿನಂತೆ ನಿದ್ದೆಯಲ್ಲಿರುವ ತಂಗಿಯನ್ನು ನೋಡಿ ಮನಸ್ಸು ಮೆತ್ತಗಾಗುತ್ತಿತ್ತು. ಎಂಥ ಜೀವತುಂಬಿದ ಹುಡುಗಿ. ಕೆಲಸದಲ್ಲಿ ಅದೇನು ಅಚ್ಚುಕಟ್ಟು. ಸ್ಟಡಿಯಲ್ಲೂ ಅಷ್ಟೇ ಜಾಣೆ. ಆಕೆಯ ಕೈನಲ್ಲಿ ಏನೋ ಮಾಂತ್ರಿಕತೆಯಿದೆ. ಏನೇ ಅಡುಗೆ ಮಾಡಿದರೂ ಅದರ ರುಚಿಯ ಪರಿಯೇ ಬೇರೆ. ಚಿಕ್ಕ ವಯಸ್ಸಿನಲ್ಲಿಯೇ ಎಂಥ ಅದ್ಭುತ ಅಡುಗೆ ಕಲಿತಿದ್ದಾಳೆ. ಮಾತ್ರವಲ್ಲ, ಅದನ್ನು ಪ್ರೆಸೆಂಟ್ ಮಾಡುವ ರೀತಿಯೂ ಅನನ್ಯ. ಎಲ್ಲಿಂದ ಕಲಿತಳೋ ಈ ಹುಡುಗಿ! ತುಂಟತನವಿದ್ದರೂ ವಯಸ್ಸಿಗೆ ಮೀರಿದ ಪ್ರಬುದ್ಧತೆ ಅವಳದು.

ಯಾಕೋ ತಾನು ಸೋಲುತ್ತಿರುವೆ ಅನಿಸಿತು. ಹಗುರ ಅವಳ ಮೈಮೇಲೆ ಚಾದರ ಬಿಡಿಸಿ ಕೋಣೆಯಿಂದ ಹೊರಗೆ ಬಂದು ಗಳಗಳನೇ ಅತ್ತುಬಿಟ್ಟ. ಈಗ ಅಪ್ಪನನ್ನು ಕರೆಸುವುದೋ ಅಥವಾ ಶೈಲತ್ತೆಯನ್ನೋ? ಅಪ್ಪನಿಗೆ ಗೊತ್ತಾದರೆ ಮತ್ತೆ ರಾಕ್ಷಸನಾಗುತ್ತಾನೆ. ಶೈಲತ್ತೆಗೆ ತಿಳಿಸಿ ಅಪ್ಪನಿಗೆ ಹೇಳದಿದ್ದರೆ ನಾನು ಪಿತೃದ್ರೋಹಿಯಾಗುತ್ತೇನೆ. ಇಬ್ಬರನ್ನು ಕರೆಸಿದರೂ ಅದು ಎಲ್ಲರಿಗೂ ಜಾಹೀರಾಗಿ ರಂಪಾಟವಾಗುವುದು ಮಾತ್ರ ಖಾತ್ರಿ. ಬೇಡ, ನಾನೇ ನನ್ನ ಲೆವೆಲ್ಲಿನಲ್ಲಿ ಇದನ್ನು ಸಂಭಾಳಿಸುತ್ತೇನೆ... ಆದರೆ ಅದು ಹೇಗೆ ಮಾಡಲಿ? ವಿರುಪಾಕ್ಷಿ ತಲೆಯೊಳಗೆ ಎರಡು ಮೈಲಿಯಾಚೆಯ ಕಡಲು ಬೆಳಗಾಗುವವರೆಗೂ ಬಂದು ಬಂದು ಅಪ್ಪಳಿಸುತ್ತಿತ್ತು.

***

ಪ್ರೇಮಿಗಳು ಒಂದಿನ ಮೀಟ್ ಮಾಡದಿದ್ದರೂ ವಿರಹ ಭರತದಂತೆ ಉಕ್ಕುತ್ತದೆ. ನೊರೆಯುಕ್ಕಿಸುವ ತೆರೆಗಳಂತೆ ಮನಸ್ಸು ಚಡಪಡಿಸುತ್ತದೆ. ಇವೆಲ್ಲ ಪ್ರೇಮದ ತೀವ್ರತೆಯ ಸೂಚಕಗಳು... ಇಂಥ ಮಾತುಗಳು ಶೈಲತ್ತೆ ಹೇಳಿದ ಪ್ರೇಮಕತೆಗಳಲ್ಲಿ ಕೇಳಿದ ಸಾಲುಗಳೇ ಆಗಿದ್ದವು. ಬಹುಶಃ ಭರತದಂತೆ, ತೆರೆಗಳಂತೆ ಎಂಬಿತ್ಯಾದಿ ಉಪಮೆಗಳು ಮಾತ್ರ ಬದಲಾಗಿರಬಹುದು, ಅಷ್ಟೆ! ಬಿಡುಗಡೆಗೊಳಿಸುವ ಒಲವೇ ಬಂಧನವಾಗುವ ಪರಿಗೆ ಸುಮಿ ಚಕಿತಳಾಗುವಳು. ಬಂಧನ–ಬಿಡುಗಡೆ ಎರಡರ ಅರ್ಥವನ್ನು ಹುಡುಕಾಡುವಳು. ಕೆಲವೊಮ್ಮೆ ತಾನು ಪ್ರೇಮದ ಸ್ವರೂಪವನ್ನು ಹೀಗೆ ಹಿಂಜಿ ನೋಡುವುದು ತರವಲ್ಲ ಅನಿಸುವುದು. ಸುಮಿಯ ಮನಸ್ಸು ಪ್ರೇಮದ ಆರಾಧನೆ ಮಾಡುತ್ತಿತ್ತು. ಪ್ರೇಮಕ್ಕಾಗಿ ಕಾತರಿಸುತ್ತಿತ್ತು. ಕಡಲ ಆಕರ್ಷಣೆ ಅದರ ಬಾಹ್ಯರೂಪವಾಗಿತ್ತು. ಪ್ರೀತಂನಿಗೆ ಈ ಪ್ರೇಮವೆನ್ನುವುದು ಆಕಸ್ಮಿಕದಲ್ಲಿ ಸಂಭವಿಸಿತ್ತು. ಆತ ಪ್ರೇಮಕ್ಕಾಗಿ ಎಂದೂ ಹಂಬಲಿಸಿರಲಿಲ್ಲ. ಹುಡುಕಾಡಿರಲಿಲ್ಲ. ಸುಮಿಗೆ ಪ್ರೇಮವು ಅರಸುತ್ತಿದ್ದ ಬಳ್ಳಿ ಹೃದಯದಲ್ಲೇ ಸಿಕ್ಕಂತಾದರೆ, ಪ್ರೀತಂನಿಗೆ ಪ್ರೇಮ ಪ್ರತ್ಯಕ್ಷವಾದ ಹಾಗೆ! ಪ್ರೇಮದ ಅಲೌಕಿಕತೆ ಅಥವಾ ಅಮರತ್ವದ ಬಗ್ಗೆ ಆತ ಎಂದೂ ಯೋಚಿಸಲಾರ. ಆಕಸ್ಮಿಕದಲ್ಲಿ ಒಲಿದಿದ್ದರೂ ಪ್ರೇಮವನ್ನು ಈ ಕ್ಷಣದ ಗಾಳಿ ನೀರು ಬೆಳಕಿನಂತೆ ಸ್ವೀಕರಿಸಿದ್ದ. ಪ್ರೀತಂನಿಗೆ ಪ್ರೇಮದ ಕಡಲಲ್ಲಿ ತೇಲುತ್ತಿರಬೇಕು ಎಂಬಾಸೆ. ಅದೇ ಸುಮಿಗೆ ಪ್ರೇಮದ ಕಡಲಿನ ಆಳಕ್ಕಿಳಿಯಬೇಕು ಎಂಬ ಆಕಾಂಕ್ಷೆ. ಪ್ರೀತಂನಿಗೆ ಪ್ರೇಮದಲ್ಲಿ ಮಾತು ಮುಖ್ಯವಲ್ಲ. ಸುಮಿಗೆ ಮಾತಲ್ಲೂ ಪ್ರೇಮಮಂಟಪ ಕಟ್ಟಬೇಕು. ಅವಳಿಗೆ ಪ್ರೇಮವನ್ನು ಒಂದು ಸಂಭ್ರಮವನ್ನಾಗಿಸುವ ಮನಸ್ಸು. ಪ್ರೀತಂನಿಗೆ ಪ್ರೇಮವೇ ಸಂಭ್ರಮ; ಸಂಭ್ರಮವೆಂಬುದು ಬೇರೆ ಇಲ್ಲ. ಅದು ಅವನಿಗೆ ಪ್ರೇಮದ ಜಿಜ್ಞಾಸೆಯಿಂದ ಮೂಡಿದ ಮಾತಲ್ಲ. ಸಹಜ ಅರಿವಿನಿಂದ ದಕ್ಕಿದ್ದು... ಹೀಗೆ ಇಬ್ಬರ ಪ್ರೇಮವು ಗಾಢವಾದರೂ ಅದನ್ನು ಗ್ರಹಿಸುವ ಪರಿಯಲ್ಲಿ ಭಿನ್ನತೆಯಿತ್ತು. ಬಹುಶಃ ಆ ಭಿನ್ನತೆಯೂ ಪ್ರೇಮ ಪೊರೆಯುವಲ್ಲಿ ಪೂರಕವೇ ಆಗಿರಬಹುದು! ಪ್ರೀತಂ ಮತ್ತು ಸುಮಿಯರ ಒಲವಿಗೆ ಅದರ ಅಭಿವ್ಯಕ್ತಿಗೆ ಸುಂದರ ಕಾರವಾರವೂ ಪೂರಕವಾದದ್ದು ಮಾತ್ರ ಸುಳ್ಳಲ್ಲ. ಕಡಲ ತೀರವು ಅವರ ಪ್ರೇಮವನ್ನು ನಿತ್ಯನೂತನಗೊಳಿಸುತ್ತಿತ್ತು.

'ಪ್ರೀತ್ ಈ ಮನಸ್ಸು ಹೃದಯ ಒಂದಾಗುವುದು ಆತ್ಮ ಸಾಕ್ಷಾತ್ಕಾರವೇ ಸರಿ, ಅಲ್ವ?' ಎಂದಳು.

'ಪ್ರೀತಿ ಪ್ರೇಮ ಅಥವಾ ಲೈಫನ್ನು ನೀನು ಮತ್ತೆ ಮತ್ತೆ ಅಷ್ಟೊಂದು ಫಿಲಾಸಫಿಕಲ್ ಆಗಿ ನೋಡುವುದು ಯಾಕೆ? ಈ ಗಳಿಗೆಯಲ್ಲಿ ನೀನು, ನಿನ್ನ ಈ ಸುಂದರ ಕಣ್ಣುಗಳು, ಚಿಕ್ಕ ಭಾವಕ್ಕೂ ಕಂಪಿಸುವ ನಿನ್ನ ಆ ಹುಬ್ಬುಗಳು, ನಿನ್ನ ಪ್ರತಿ ಮಾತಿಗೂ ಜೇನು ಅಂಟಿಸುವ ಈ ತುಟಿಗಳು... ಇವು ಮಾತ್ರ ಸತ್ಯ. ಅವುಗಳಾಚೆ ನಾನು ಏನನ್ನು ಯೋಚಿಸಲಾರೆ' ಎಂದ.

'ಇದೇ ಒಂದು ಫಿಲಾಸಫಿ ಆಯ್ತಲ್ಲೋ ಗುರು' ಎಂದಳು.

'ಅದಕ್ಕೇ, ಈ ಫಿಲಾಸಫಿಗಳನ್ನೆಲ್ಲ ಸಮುದ್ರಕ್ಕೆ ಎಸೆಯೋಣ... ಬಾ ಸುಮ್ಮನೇ ಅಪ್ಪಿಕೊಳ್ಳೋಣ' ಎಂದು ಅವಳನ್ನು ಸನಿಹಕ್ಕೆಳೆದುಕೊಂಡ.

(ಸಶೇಷ)